**ವಿಷಯ : ಹಿಂದೂಸ್ಥಾನಿ ಸಂಗೀತ (26) N.S.**

**ಏಪ್ರೀಲ್–2022**

ವರ್ಗ: ಪಿ.ಯು.ಸಿ. ದ್ವಿತೀಯ

**ವಿಷಯ : ಹಿಂದೂಸ್ಥಾನಿ ಸಂಗೀತ (26) N.S.**

---

**ಪ್ರ.1) ರಾಗ ಖಮಾಜ ಪರಿಚಯ**

ಥಾಟ – ಖಮಾಜ

ಜಾತಿ – ಷೌಢವ–ಸಂಪೂರ್ಣ

ಕೋಮಲಾಸ್ವರ– ನಿಷಾದ (ನಿ)

ವಾದಿ – ಗಾಂಧಾರ (ನಿ)

ಸಂವಾದಿ – ನಿಷಾದ (ನಿ)

ಗಾನ ಸಮಯ – ರಾತ್ರಿ ಎರಡನೇ ಪ್ರಹರ

ಆರೋಹ – ಸಾ, ಗಮ, ಪ, ಧ, ನಿ ಸಾ।

ಅವರೋಹ – ಸಾ, ನಿ, ಧ, ಪ, ಮಗ, ರೆಸಾ ।

ಪಕ್ಕಡ – ನಿ ಧ, ಮಪ, ಧ, ಮಗ ।

**ಸ್ವರಲಿಪಿ ತ್ರಿತಾಳ ಛೋಟಾಖ್ಯಾಲ್**

| | | | |
|---|---|---|---|
| ಸಾ ಗ ಮ ಪ | ಗ ಮ ನಿ ಧ | ನಿಸಾ ನಿಸಾ ನಿಧ | ಮ ಪ ಮ ಗ |
| ಶ್ಯಾ ಽ ಮ ಸುಂ | ದ ರ ಬ ನ | ಮಾಽ ಽಽ ಲೀಽ | ಕೇ ಽ ಸ ಖಿ |
| 0 | 3 | x | 2 |
| ನಿ ನಿ ಸಾ ಸಾ | ನಿ ಸಾ ನಿ ಧ | ಗ ಮ ಸಾ ನಿ | ಧಪ ಧಪ ಮ ಗ |
| ದ ರ ಸ ಬಿ | ನಾ ಽ ಽ ಜಿ | ಯಾ ಽ ತ ರ | ಸಾಽ ಽಽ ಯೇಽ |
| 0 | 3 | x | 2 |

**ಅಂತರಾ**

| | | | |
|---|---|---|---|
| ಮ ನಿ ಧ ನಿ | ಸಾ – ನಿ ಸಾ | ಸಾ – ಸಾ ಸಾ | ನಿ ಸಾ ನಿ ಧ |
| ಸೋ ಽ ಹ ನಿ | ಸೂ ಽ ರ ತ | ಮೋ ಽ ಹ ನಿ | ಮೂ ಽ ರ ತ |
| 0 | 3 | x | 2 |
| ಸಾ ಗ ಮ ಗ | ಸಾ ನಿ ಧ ಪ | ಗ ಮ ಪ ಧ | ನಿ ನಿ ಸಾ – |
| ಹ ರ ರಂ ಗ | ಕೀ ಽ ಛ ಬ | ಮೋ ಽ ಮ ನ | ಬ ಸ ಸ ಖಿ |
| 0 | 3 | x | 2 |
| ನಿ ನಿ ಸಾ ಸಾ | ನಿ ಸಾ ನಿ ಧ | ಗ ಮ ಸಾ ನಿ | ಧಪ ಧಪ ಮ ಗ |
| ದ ರ ಸ ಬಿ | ನಾ ಽ ಽ ಜಿ | ಯಾ ಽ ತ ರ | ಸ ಽ ರಽ ಹೀ ಽ |
| 0 | 3 | x | 2 |

**ಆಲಾಪಗಳು**

| | | |
|---|---|---|
| 1. | ಸಾ ಗ ಮ ಪ | ಧ ನಿ ಸಾ ಽ |
| 2. | ಸಾ ನಿ ಧ ಪ | ಮ ಗ ರೆ ಸಾ |
| 3. | ನಿ ಧ ಮ ಪ | ಧ ಮ ಗ ಽ |
| 4. | ಗ ಮ ನಿ ಧ | ಸಾ ನಿ ಸಾ ಽ |

**ತಾನಗಳು**

1. ಸಾಗಮಪ ಧನಿಸಾ ಸಾನಿಧಪ ಮಗರೆಸಾ ।
2. ಸಾಗಮಪ ಗಮನಿಧ ಸಾನಿಧಪ ಮಗರೇಸಾ ।
3. ಸಾನಿಧಪ ಸಾನಿಧಪ ಸಾನಿಧಪ ಮಾಗರೇಸಾ ।
4. ಸಾಗಮಗ ಸಾನಿಧಪ ಸಾನಿಧಪ ಮಾಗರೇಸಾ ।

ಇದೇ ಪ್ರಕಾರ ವಿದ್ಯಾರ್ಥಿನಿಯರು ಸಿತಾರ ಅಥವಾ ಛೋಟಾಖ್ಯಾಲ್‌ದವುಗಳನ್ನು ಬರೆದಿರಬೇಕು.

**ಅಥವಾ**

**ರೂಪಕ ತಾಳ**

ಜಾತಿ – ವಿಷಮ ಖಂಡ

ಮಾತ್ರಾ – 7

ಭಾಗ – 3–2–2 ರಂತೆ 3

ಪೆಟ್ಟು – 1, 4, 6

ಹುಸಿ – ಇರುವುದಿಲ್ಲ.

| | | |
|---|---|---|
| 1 2 3 | 4 5 | 6 7 |
| ತಿ ತಿ ನ್ನಾ | ಧಿ ನ್ನಾ | ಧಿ ನ್ನಾ |
| x | 2 | 3 |

ಇದೇ ಪ್ರಕಾರ ವಿದ್ಯಾರ್ಥಿಗಳು ಇನ್ನೊಂದು ತಾಳವನ್ನು ಬರೆದಿರಬೇಕು.

**ಪ್ರ.2)** ವೇದಕಾಲದಲ್ಲಿ ಬರುವ ಋಗ್ವೇದ, ಯಜುರ್ವೇದ, ಸಾಮವೇದ ಹಾಗೂ ಅಥರ್ವಣ ವೇದಗಳನ್ನು ಆಳವಾಗಿ ಅಭ್ಯಸಿಸಿದಾಗ ಸಂಗೀತವು ಪ್ರಚಾರದಲ್ಲಿತ್ತು ಎನ್ನಲು ಮೃದಂಗ, ವೀಣೆ, ವಂಶಿ, ಡಮರು, ಗರ್ಗರ, ಪೂಣೆ ಹಾಗೂ ಗೀತ, ವಾದ್ಯ ನೃತ್ಯಗಳು ಪ್ರಚಾರದಲ್ಲಿದ್ದವು. ಎನ್ನುವುದು ಸ್ಪಷ್ಟವಾಗುತ್ತದೆ. ಅದರ ಬಗ್ಗೆ ಉಲ್ಲೇಖವಿದೆ. ಋಗ್ವೇದ ಕಾಲದಲ್ಲಿ ಜನರಿಗೆ ತಂತುಗಳಿಂದ ವೀಣೆಗಳನ್ನು ಹಾಗೂ ಚರ್ಮದಿಂದ ಅವನದ್ಧ ವಾದ್ಯಗಳನ್ನು ತಯಾರಿಸುವ ಪರಿಚಯವಿತ್ತೆಂದು ಗೊತ್ತಾಗುತ್ತದೆ. ಋಗ್ವೇದದಲ್ಲಿ ಸಂಗೀತ ಹಾಗೂ ನೃತ್ಯಗಳು ಬಹಳ ಉಚ್ಚಮಟ್ಟಕ್ಕೆ ಇದ್ದವು. ನೃತ್ಯ ಕಾರ್ಯಕ್ರಮಗಳು ಸಾರ್ವಜನಿಕ ಸಭಾಮಂಟಗಳಲ್ಲಿ ನಡೆಯುತ್ತಿದ್ದವು. ಇಂತಹ ನೃತ್ಯ

ಸಮಾರಂಭಗಳಲ್ಲಿ ಸ್ತ್ರೀ–ಪುರುಷರು ಸಮಾನವಾಗಿ ಭಾಗವಹಿಸುತ್ತಿದ್ದರು. ಸ್ತ್ರೀಯರು ನೃತ್ಯ ಮಾಡುವ ಸಮಯದಲ್ಲಿ ಕಾಲುಗಳಿಗೆ ಗೆಜ್ಜೆಗಟ್ಟಿ ನರ್ತಿಸುತ್ತಿದ್ದರು. ನೃತ್ಯದ ಜೊತೆಗೆ ಗಾಯನ ವಾದನ ನಡೆಯುತ್ತಿದ್ದವು. ನೃತ್ಯ ಭಂಗಿಗಳ ಅನೇಕ ಪ್ರಾಚೀನ ಮೂರ್ತಿಗಳೂ ಇದಕ್ಕೆ ಪ್ರಮಾಣವಾಗಿವೆ. ಅಲ್ಲದೆ ಸಾಮಗಾನದಲ್ಲಿ ಮೊದಲೇ ಸ್ವರಗಳಿದ್ದವು. ಉದಾತ (ನಿ, ಗ), ಅನುದಾತ (ರಿ–ಧ) ಹಾಗೂ ಸ್ವರಿತ (ಸ.ಮ.ಪ) ಅಲ್ಲದೆ ಅನೇಕ ರಾಗಗಳೂ ಸಹ ಹುಟ್ಟಿದವು. ಇದೇ ಕಾಲದಲ್ಲಿ ಋಷಿಗಳು ಯಜ್ಞ ಮಾಡುವಾಗ ಒಂದೇ ಸ್ವರದಿಂದ ಮಂತ್ರ ಪಠಣ ಮಾಡುತ್ತಿದ್ದರು. ಇದಕ್ಕೆ "ಆರ್ಚಿಕ" ಎಂದು ಕರೆದರು. ಎರಡು ಸ್ವರಗಳನ್ನು ಉಪಯೋಗಿಸಿ ಮಂತ್ರ ಪಠಣ ಮಾಡುವುದಕ್ಕೆ "ಗಾಥಿಕ" ಎಂದು ಕರೆದರು. ಮೂರು ಸ್ವರಗಳನ್ನು ಉಪಯೋಗಿಸಿ ಹಾಡುವುದಕ್ಕೆ "ಸಾಮಿಕ" ಎಂದು ಹೆಸರಿಸಿದರು. ನಾಲ್ಕು ಸ್ವರಗಳನ್ನು ಉಪಯೋಗಿಸುವುದಕ್ಕೆ "ಸ್ವರಾಂತರ" ಎಂದರು. ಹೀಗೆ ಕ್ರಮೇಣ ಕಾಲವು ಕಳೆದಂತೆ ಐದು, ಆರು, ಏಳು, ಔಢವ–ಷೌಢವ ಹಾಗೂ ಸಂಪೂರ್ಣ ಸ್ವರಗಳಾಗಿ ರೂಪಗೊಂಡವು. ಒಟ್ಟಿನಲ್ಲಿ ಹೇಳಬೇಕಾದುದಿಷ್ಟೇ ವೇದ ಕಾಲದಲ್ಲಿ ಗಾಯನ, ವಾದನ, ಹಾಗೂ ನರ್ತನ ಕಲೆಗಳಿದ್ದವು. ಜನರಲ್ಲಿ ಕಲಿಯುವ ಆಸಕ್ತಿ ಇತ್ತು. ಸಮಾಜದಲ್ಲಿ ಕಾರ್ಯಕ್ರಮಗಳು ಜರುಗುತ್ತಿದ್ದವು.

**ಅಥವಾ**

**ಪ್ರ.2)ಬಿ) ಶೃತಿ :–** ಶೃತಿಯು ನಾದದ ಅತ್ಯಂತ ಚಿಕ್ಕ ಘಟಕವಾಗಿದೆ. ಸ್ಥೂಲವಾಗಿ ಹೇಳುವುದಾದರೆ ನಾದದಲ್ಲಿ ನಮಗೆ ಕೇಳಿಬರುವ ಅತ್ಯಂತ ಸೂಕ್ಷ್ಮ ವ್ಯತ್ಯಾಸವು ಶೃತಿಯನ್ನು ಪ್ರತಿನಿಧಿಸುತ್ತದೆ. ಇದನ್ನು ಶಾಸ್ತ್ರಕಾರರು "ಶ್ರೂಯತೇ ಇತಿಃ ಶೃತಿ;" ಅಂದರೆ ಯಾವ ಅತಿ ಚಿಕ್ಕ ನಾದ ವ್ಯತ್ಯಾಸವನ್ನು ನಾವು ಕೇಳಲು ಸಾಧ್ಯವೋ ಅದು ಶೃತಿ ಎಂದು ವ್ಯಾಖ್ಯಾನಿಸಿದ್ದಾರೆ. ಈ ರೀತಿ ಗುರುತಿಸಲು ಸಾಧ್ಯವಿರುವ ಚಿಕ್ಕ ಚಿಕ್ಕ ನಾದದ ಅಂತರಗಳನ್ನು ವಿವಿಧ ನಾಮಗಳಿಂದ ಪ್ರಾಚೀನ ಸಂಗತಜ್ಞರು ನಿರೂಪಿಸಿದ್ದಾರೆ. ಭಾರತೀಯ ಸಂಗೀತ ಶಾಸ್ತ್ರದ ಅನುಸಾರ ಒಂದು ಸಪ್ತಕದಲ್ಲಿ ಒಟ್ಟು 22 ಶೃತಿಗಳು ಗುರುತಿಸಲ್ಪಟ್ಟಿವೆ. ಸಂಗೀತ ಸಪ್ತ ಸ್ವರಗಳನ್ನು ಈ 22 ಶೃತಿಗಳಲ್ಲಿ ಆಯ್ದ ಕೆಲವು ಶೃತಿ ಸ್ಥಾನಗಳಲ್ಲಿ ಸ್ಥಾಪಿಸಿದ್ದಾರೆ. ಇಷ್ಟು ಸೂಕ್ಷ್ಮವಾದ ಶೃತಿಗಳೂ ಪ್ರತಿಯೊಂದು ಭಿನ್ನ ಕ್ಷೇತ್ರ ಫಲವನ್ನು ಹೊಂದಿರುವುದಾಗಿ ಶಾಸ್ತ್ರಕಾರರು ಸಾರಣಾ ಪ್ರಕ್ರಿಯೆಯ ಮುಖಾಂತರ ನಿರೂಪಿಸಿದ್ದಾರೆ. ಪ್ರಾಚೀನ ಶಾಸ್ತ್ರಕಾರರಲ್ಲೂ ಶೃತಿಗಳ ಸಂಖ್ಯೆಯಲ್ಲಿ ಮತಭೇದಗಳಿದ್ದರೂ ಅಂತಿಮವಾಗಿ 22 ಶೃತಿ ಸ್ಥಾನಗಳು ಶಾಸ್ತ್ರಬದ್ಧವಾಗಿ ನಿರೂಪಿತವಾಗಿವೆ.

ಸಪ್ತ ಸ್ವರಗಳನ್ನು 22 ಶೃತಿಗಳಲ್ಲಿ ವಿಂಗಡಿಸುವಾಗ ಕೆಲವು ಸ್ವರಗಳಿಗೆ 4 ಇನ್ನು ಕೆಲವಕ್ಕೆ ತಲಾ 3 ಅಥವಾ 2 ಹೀಗೆ ಸಂಖ್ಯಾ ವ್ಯತ್ಯಾಸವು ಕಂಡು ಬರುತ್ತದೆ. ಇದಕ್ಕೆ ಸೂತ್ರವಾಗಿ ಚತುರ್ಶಚತುಶ್ಚತುಶ್ಚೈವ ಷಡ್ಜ ಮಧ್ಯಮ ಪಂಚಮ, ತ್ರೈಸ್ತ್ರೈ ರಿಷಭ ಧೈವತ, ದ್ವೈ ದ್ವೈ ನಿಷಾದ ಗಾಂಧಾರ" ಎಂಬ ಶ್ರೀ ಮಲ್ಲಕ್ಷ್ಯ ಸಂಗೀತ ಗ್ರಂಥದ ಶ್ಲೋಕವು ಪ್ರಮಾಣವಾಗಿದೆ. ಅಂದರೆ ಷಡ್ಜ–ಮಧ್ಯಮ–ಪಂಚಮ ಸ್ವರಗಳಿಗೆ ತಲಾ 4, ರಿಷಭ–ಧೈವತ ಸ್ವರಗಳಿಗೆ ತಲಾ 3 ಹಾಗೂ ಗಾಂಧಾರ–ನಿಷಾಧಗಳಿಗೆ ತಲಾ 2 ಶೃತಿಗಳನ್ನು ಹಂಚಲಾಗಿದೆ.

**ಪ್ರ.3) ಜಯದೇವ (ಸಂಗೀತಜ್ಞ)**

ಭಾರತೀಯ ಸಾಹಿತ್ಯ ಮತ್ತು ಸಂಗೀತ ಕ್ಷೇತ್ರದಲ್ಲಿ ಜಯದೇವನ ಹೆಸರು ಯಾವತ್ತೂ ಉಲ್ಲೇಖನೀಯವಾಗಿದೆ. ಶ್ರೇಷ್ಠಕವಿ, ಸಂಗೀತಜ್ಞ ಹಾಗೂ ವಾಗ್ಗೇಯಕಾರ ಈ ಎಲ್ಲ ರೀತಿಯಲ್ಲಿ ಜಯದೇವರು ಭಾರತೀಯ ಸಾಂಸ್ಕೃತಿಕ

ಕ್ಷೇತ್ರಕ್ಕೆ ಬಹು ಅಮೂಲ್ಯ ಕೊಡುಗೆ ನೀಡಿರುತ್ತಾರೆ. ಬಂಗಾಲ ಪ್ರಾಂತದ ಕೆಂಡುಲಾ ಗ್ರಾಮದಲ್ಲಿ ಜನಿಸಿದ ಜಯದೇವನ ಜೀವಿತ ಕಾಲ 11–12 ನೇ ಶತಮಾನದ ಕಾಲವೆಂದು ಅಂದಾಜಿಸಲಾಗುತ್ತದೆ. ವೈಷ್ಣವ ಸಂಪ್ರದಾಯದ ಸುಪ್ರಸಿದ್ಧ ಸಂತ ಶ್ರೀ ಯಶೋದಾನಂದರು ಇವರ ಗುರುಗಳು.

ಬಾಲ್ಯದಲ್ಲಿಯೇ ತಂದೆ ತಾಯಿಗಳನ್ನು ಕಳೆದುಕೊಂಡು ಜಗನ್ನಾಥಪುರಿಯಲ್ಲಿ ಬಂದು ನೆಲೆಸಿದರು. ಸಂಸ್ಕೃತ ಭಾಷೆಯ "ಗೀತ ಗೋವಿಂದ" ಗ್ರಂಥವು ಜಯದೇವರ ಅಮರ ಕೃತಿಯಾಗಿದೆ. ಇದು ಅನೇಕ ಭಾರತೀಯ ಭಾಷೆಗಳಲ್ಲಿ ಅಲ್ಲದೇ ಲ್ಯಾಟಿನ್, ಜರ್ಮನ್ ಹಾಗೂ ಇಂಗ್ಲೀಷ್ ಭಾಷೆಗಳಲ್ಲಿಯೂ ಅನುವಾದಗೊಂಡಿದೆ.

ಗೀತ–ಗೋವಿಂದ ಕೃತಿಯ ಪ್ರತಿಯೊಂದು ಅಷ್ಟಪದಿಗೆ ಸ್ವತಃ ರಾಗ ತಾಳಗಳನ್ನು ಸ್ಪಷ್ಟವಾಗಿ ಸಂಯೋಜಿಸಿರುತ್ತಾರೆ. ರಾಧಾ ಕೃಷ್ಣರನ್ನು ವರ್ಣಿಸುವ ಪ್ರಬಂಧ ಗೀತವು ಇದಾಗಿದ್ದು ಹಿಂದೆ ಪ್ರಚಲಿತವಿದ್ದ ಪ್ರಬಂಧ ಗಾಯನ ಶೈಲಿಯಲ್ಲಿ ಪ್ರಸ್ತುತಗೊಳ್ಳುತ್ತಿದ್ದ ಪ್ರಮುಖ ಕೃತಿಯು ಇದಾಗಿದೆ.

ಇದೇ ಪ್ರಕಾರ ವಿದ್ಯಾರ್ಥಿಗಳು ಇನ್ನುಳಿದವರ ಕುರಿತು ಬರೆಯಬಹುದಾಗಿದೆ.

ಪ್ರ.4)ಎ) **ಜೈಪೂರ ಘರಾಣಾ :–** ಜೈಪೂರ ಘರಾಣಾವನ್ನು ದಿವಂಗತ ಅಲ್ಲಾದಿಯಾ ಖಾನರು ಸ್ಥಾಪಿಸಿದ್ದಾರೆ. ಇವರು ಮಹಾರಾಷ್ಟ್ರದ ಕೊಲ್ಹಾಪುರದವರು, ಈ ಘರಾಣಾದಲ್ಲಿ ವಿಲಂಬಿತ, ಗಮಕಯುಕ್ತ ಆಲಾಪ ಹಾಗೂ ಕಠಿಣ ಅಂದರೆ ಅತೀ ವಕ್ರತಾನಗಳ ಪ್ರಯೋಗವಿರುತ್ತದೆ. ಸಂಗೀತಗಾರರು ಸ್ವರಗಳ ಮೇಲೆ ಗಟ್ಟಿಯಾಗಿ ಉಸಿರು ಹಿಡಿದುಕೊಂಡು ಐದಾರು ನಿಮಿಷದವರೆಗೆ ಸ್ವರ ಹಚ್ಚುತ್ತಾರೆ. ವಕ್ರತಾನಗಳು, ಮುರ್ಖಾ ತಾನಗಳ ಜೋಡತಾನಗಳನ್ನು ಹೆಚ್ಚು ಹೆಚ್ಚು ಹಾಡುತ್ತಾರೆ. ಹೊಸ ಹೊಸ ಬಂದೀಶ್‌ಗಳನ್ನು ವಿಲಂಬಿತ ತೀನತಾಲದಲ್ಲಿ ಬಹುತೇಕ ಹಾಡುತ್ತಾರೆ. ಅಪ್ರಚಲಿತ ರಾಗಗಳನ್ನು ಹೆಚ್ಚಾಗಿ ಹಾಡುತ್ತಾರೆ. ವಿಲಂಬಿತ ಏಕತಾಳವಲ್ಲದೆ ತೀನ ತಾಳದಲ್ಲಿಯೇ ಹೆಚ್ಚು ಹಾಡುತ್ತಾರೆ. ಧೃತ್‌ಗತ್‌ಗಳನ್ನು ಹಾಡುವುದು ಅತೀ ಕಡಿಮೆಯಾಗಿರುತ್ತದೆ. ಧೃತ್‌ಗತ್‌ದಲ್ಲಿ ಮಾಡುವಂತಹ ಕಾಲ್ಪನಿಕ ಕೆಲಸವನ್ನು ವಿಲಂಬಿತ ಗತ್‌ದಲ್ಲಿ ಸಾಮಾನ್ಯವಾಗಿ ಹಾಡುತ್ತಾರೆ. ಸ್ವರ–ಲಯ, ಸೌಂದರ್ಯ ರಾಗದಲ್ಲಿ ಇರುತ್ತದೆ. ಈ ಘರಾಣಾದ ಪ್ರಸಿದ್ಧ ಸಂಗೀತಗಾರರರೆಂದರೆ ಉಸ್ತಾದ್ ಮಂಜೀಖಾನ್, ಉಸ್ತಾದ ಬುರ್ಜಿಖಾನ್, ಶ್ರೀಮತಿ ಕಿಶೋರಿ ಅಮ್ಮೋನಕರ್, ಪಂ.ಮಲ್ಲಿಕಾರ್ಜುನ ಮನ್ಸೂರ, ಪಂ.ಪಂಚಾಕ್ಷರಿ ಮತ್ತಿಗಟ್ಟಿ.

ಬಿ) **ಪಂಜಾಬ್ ಘರಾಣಾ:–** ಪಂಜಾಬ್ ಘರಾಣೆಯ ಮುಖ್ಯ ರೂವಾರಿಗಳಾದ ಉಸ್ತಾದ ಫಕರೀಭಕ್ಷರವರು ಪಖಾವಜ್‌ನಲ್ಲಿ ನುಡಿಸುವ ಖುಲ್ಲಾ ಬೋಲುಗಳನ್ನು ತಬಲಾದಲ್ಲಿ ಬಂದ್ ಬೋಲಿಗೆ ವರ್ಗಾಯಿಸಿ ನುಡಿಸಿದರು. ಈ ರೀತಿಯಾಗಿ ಪಂಜಾಬ್ ಘರಾಣೆಯು ಭಿನ್ನ ಬೆಳವಣಿಗೆಯನ್ನು ಕಂಡಿತು. ಪಖಾವಜ್‌ನ ವಿಶಿಷ್ಟ ರಚನೆಯ ಬೋಲುಗಳನ್ನು ನಾವು ಪಂಜಾಬ್ ಘರಾಣೆಯಲ್ಲಿ ಕಾಣಬಹುದಾಗಿದೆ. ಈ ಘರಾಣೆಯ ಕಾಯದಾಗಳು ಅಧಿಕ ಸಮಯದ್ದಾಗಿರುತ್ತದೆ.

ಗತ್ತ ಪರನ್, ವಿಭಿನ್ನ ಲಯಕಾರಿಯುಕ್ತ ಗತ್ತಗಳು ಈ ಬಾಜ್‌ನ ಪ್ರಮುಖ ಅಂಶಗಳಾಗಿವೆ. ಈ ಬಾಜ್‌ನಲ್ಲಿ ಚಕ್ರಧಾರ ಗತ್ತಗಳಿಗೆ ಹೆಚ್ಚು ಪ್ರಾಮುಖ್ಯತೆಯನ್ನು ಕೊಟ್ಟು ನುಡಿಸಲಾಗುತ್ತದೆ. ಈ ಘರಾಣೆಯ

ಇನ್ನೊಂದು ವಿಶಿಷ್ಟತೆಯೆಂದರೆ ಈ ಬಾಜ್‌ನಲ್ಲಿ ಪ್ರತಿಯೊಂದು ತಾಲವನ್ನೂ ವಿಸ್ತರಿಸಿ ನುಡಿಸಲಾಗುತ್ತದೆ. ಈ ಘರಾಣೆಯ ಪರಂಪರೆಯಲ್ಲಿ ವಿ.ಫಕರಿಭಕ್ಷ ಕಾದಿರಭಕ್ಷಖಾನ್, ಕರಾಮಯಿಲಾಹಿಖಾನ್, ಅಲ್ಲಾರಖಾ ಖಾನ್ ಮುಂತಾದವರು ಶ್ರೇಷ್ಠರಾಗಿದ್ದಾರೆ.

ಸಿ) **ಕವ್ವಾಲಿ:–** ಇದು ಮುಸಲ್ಮಾನ ಸಮಾಜದ ಒಂದು ವಿಶೇಷ ಬಗೆಯ ಗೀತ ಶೈಲಿಯಾಗಿರುತ್ತದೆ. ಈ ಶೈಲಿಯು ಈಗಲೂ ಮುಸಲ್ಮಾನ ಸಮಾಜದ ಜನಪ್ರಿಯ ಗಾಯನವಾಗಿದೆ. ಇದರ ಗೀತ ರಚನೆಯು ಹೆಚ್ಚಾಗಿ ಉರ್ದು ಮತ್ತು ಫಾರ್ಸಿ ಭಾಷೆಯಲ್ಲಿರುತ್ತವೆ. ಹಿಂದೂಗಳಲ್ಲಿಯೂ ಕವ್ವಾಲಿ ಗಾಯಕರಿದ್ದಾರೆ.

ಸ್ಥಾಯಿ ಅಂತರಾ ಮತ್ತೆ ನಡು–ನಡುವೆ ಶಾಯರಿ ಹೇಳುತ್ತಾ ಕವ್ವಾಲಿ ಹಾಡುತ್ತಾರೆ. ಶಾಯರಿ ಹೇಳುವುದು ಕವ್ವಾಲಿಯ ಮುಖ್ಯ ಲಕ್ಷಣವಾಗಿದೆ. ಈ ಶೈಲಿಗೆ ಪಖಾವಜ್ ಮತ್ತು ತಬಲಾಗಳಿಗಿಂತ ಡೋಲಕ್‌ವನ್ನು ಯೋಗ್ಯವಾದ್ಯವೆಂದು ಪಕ್ಕವಾದ್ಯವಾಗಿ ಉಪಯೋಗಿಸುತ್ತಾರೆ. ವಿಶೇಷ ಕಾರ್ಯಕ್ರಮಗಳಲ್ಲಿ ಕವ್ವಾಲಿ ಕಾರ್ಯಕ್ರಮಗಳು ಇದೇ ರಾತ್ರಿ ನಡೆಯುತ್ತವೆ.

ಕವ್ವಾಲಿ ಗಾಯಕನಿಗೆ ಹಿಮ್ಮೇಳವಾಗಿ ಪಾರ್ಶ್ವ ಗಾಯಕರು ಕೈಯಿಂದ ಚಪ್ಪಾಳೆ ತಟ್ಟುತ್ತ ಮುಖ್ಯ ಕಲಾವಿದನು ಸಾಲು ಹಾಡಿ ನಿಲ್ಲಿಸಿದ ತಕ್ಷಣ ಹಿನ್ನೆಲೆ ಗಾಯಕರು ಆ ಸಾಲನ್ನು ಮತ್ತೆ ಮತ್ತೆ ಹಾಡಿ ಗಾಯನ ಮುಂದುವರೆಸುತ್ತಾರೆ. ರಸಿಕತೆ, ಶೃಂಗಾರ ವೀರರಸಗಳನ್ನು ಉತ್ಪನ್ನ ಮಾಡುವುದೇ ಈ ಶೈಲಿಯ ಪ್ರಧಾನ ಕಾರ್ಯ ಮತ್ತು ವಿಶೇಷತೆಯಾಗಿರುತ್ತದೆ.

ಡಿ) **ಸುಗಮ ಸಂಗೀತ :–** ಸುಗಮ ಸಂಗೀತ ಎಂದು ಆಧುನಿಕ ಕಾಲದಲ್ಲಿ ಜನರು ಉಚ್ಚಾರ ಮಾಡುವ ಒಂದು ಶೈಲಿಯಾಗಿದೆ. ಶಾಸ್ತ್ರೀಯ ಸಂಗೀತದ ಮತ್ತೊಂದು ಶಾಖೆಯಾದ ಉಪಸಂಗೀತ, ಲಘುಸಂಗೀತ ವೆಲ್ಲವನ್ನು ಸುಗಮ ಸಂಗೀತವೆಂದು ಕರೆಯುವ ವಾಡಿಕೆ ಇದೆ. ಸುಗಮ ಸಂಗೀತ ಹಾಡುವ ಕಲಾವಿದರು ಕೆಲವೊಂದು ಸಾಹಿತ್ಯವನ್ನು ತೆಗೆದುಕೊಂಡು ಸ್ವರ–ಸಂಯೋಯನೆಗೊಳಿಸಿ, ಮಧುರ ಕಂಠದಿಂದ ಜನರ ಮನಸ್ಸನ್ನು ಸೆಳೆಯುವ ಒಂದು ಶೈಲಿಗೆ "ಸುಗಮ ಸಂಗೀತ"ವೆಂದು ಕರೆಯುತ್ತಾರೆ.

ಶಾಸ್ತ್ರೀಯ ಸಂಗೀತಕ್ಕೆ ಇರುವಂತೆ ರಾಗಲಕ್ಷಣ, ಸ್ವರಗಳ ಜೋಡಣೆ, ರಾಗದ ಚಲನೆಯನ್ನು, ಅವುಗಳ ನಿಯಮಗಳನ್ನು ಪಾಲಿಸಿ ಹಾಡಬೇಕೆಂದು ನಿರ್ಬಂಧನೆ, ಇವು ಸುಗಮ ಸಂಗೀತಕ್ಕೆ ಇಲ್ಲ. ಇದಕ್ಕೆ ಬೇಕಾಗಿರುವುದು ರಾಗ, ತಾಳ ಮಾತ್ರ. ಹಾಗೂ ವಾದ್ಯ ವೃಂದದ ಜೊತೆಗೆ ಹಾಡುವುದು. ಸಾಹಿತ್ಯವು ಅರ್ಥಪೂರ್ಣವಾಗಿದ್ದು, ಮನಮೋಹಕ ರಾಗಗಳಿಂದ ಜನರ ಮನಸ್ಸನ್ನು ಸೆಳೆಯುವಂತಗಹ ರಚನೆಗಳಿರಬೇಕು. ಕವಿಗಳ ಕಲ್ಪನೆಗಳನ್ನು ಸಂಗೀತ ರೂಪದಲ್ಲಿ ನಿರೂಪಿಸಿ, ಅದರ ಹಾವ–ಭಾವಗಳನ್ನು ಸ್ಪಷ್ಟಪಡಿಸುವುದೇ ಸುಗಮ ಸಂಗೀತದ ಉದ್ದೇಶವಾಗಿದೆ. ಇತ್ತೀಚಿನ ಹಿನ್ನೆಲೆ ಗಾಯಕರು ಸುಗಮ ಸಂಗೀತವನ್ನು ಇಂಪಾದ ಮಧುರ ಕಂಠದಿಂದ ಹಾಡಿ, ಈ ಶೈಲಿಯನ್ನು ಹೆಚ್ಚು ಹೆಚ್ಚು ಪ್ರಚಾರಗೊಳಿಸುವುದರಲ್ಲಿ ಸಫಲರಾಗಿದ್ದಾರೆ.

**ಪ್ರ.5)ಎ) ಹೊಂದಿಸಿ ಬರೆಯಿರಿ.**

| | ಅ | | ಬ |
|---|---|---|---|
| 1. | ಚೌತಾಳ | – | 12 ಮಾತ್ರೆಗಳು |
| 2. | ಠುಮರಿ | – | ಸಂಗೀತದ ಪ್ರಕಾರ |
| 3. | ವಾದಿ | – | ಮುಖ್ಯ ಸ್ವರ |
| 4. | ಭಾತಖಂಡೆ | – | ಸ್ವರ–ತಾಳ–ಲಿಪಿ ಪದ್ಧತಿ |
| 5. | ಮೂರ್ಛನೆಗಳು | – | 21 |
| 6. | ಲಯ | – | ಪಿತಾ |

**ಪ್ರ.5)ಬಿ) ಬಿಟ್ಟ ಸ್ಥಳ ತುಂಬಿರಿ.**

1. ಪಂ.ವಿಷ್ಣು ದಿಗಂಬರ ಪಲುಸ್ಕರರು ಸಂಗೀತಜ್ಞರು ಆಗಿದ್ದಾರೆ.
2. ಟಪ್ಪಾ ಸಂಗೀತ ಪ್ರಕಾರ ಆಗಿದೆ.
3. ಥಾಟಗಳು 10 ಇವೆ.
4. ಲ್ಯಾಸ ರಾಮಾಯಣ ಕಾಲದ ನೃತ್ಯವಾಗಿದೆ.
5. ವೇದಗಳು ನಾಲ್ಕು ಇವೆ.
6. ಎರಡು ಸ್ವರದ ಮಂತ್ರ ಪಠಣಕ್ಕೆ ಗಾಥಿಕ ಎಂದು ಕರೆಯುತ್ತಾರೆ.
7. ತ್ರಿತಾಳದಲ್ಲಿ ಮೂರು ಪೆಟ್ಟುಗಳಿವೆ.